ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ

**ಸಿ.ಸಿ.383/2025**

ಪಿರ್ಯಾದುದಾರರು ಃ ತರೀಕೆರೆ ಪೊಲೀಸ್

-ವಿರುದ್ಧ-

ಆರೋಪಿ/ತರು ಃ ನಾಗರಾಜ್ ಬಿನ್ ಮುನಿಸ್ವಾಮಿ, 49 ವರ್ಷ,ವ್ಯಾಪಾರ, ವಾಸಃ9 ನೇ ಕ್ರಾಸ್, ಕೋಡಿಕ್ಯಾಂಪ್, ತರೀಕೆರೆ.

-ಃಆಪಾದನೆಃ-

ದಿನಾಂಕಃ02.08.2025 ರಂದು ಸಂಜೆ 5-45 ರ ಸಮಯದಲ್ಲಿ ತರೀಕೆರೆ ಠಾಣಾ ಸರಹದ್ದಿನ ತರೀಕೆರೆ ಆರ್ಶೀವಾದ ಆಸ್ಪತ್ರೆಯ ಹಿಂಭಾಗ ಗಣೇಶ್ ಹಾರ್ಡವೇರ್ ಮುಂದೆ ಶೆಡ್ನಲ್ಲಿ ಗ್ರಾಮದಲ್ಲಿ ಆರೋಪಿಯಾದ ನೀವು ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೇ ಸಾರ್ವಜನಿಕರಿಗೆ ಕುಡಿಯಲು ಮದ್ಯವನ್ನು ಹಾಗೂ ನೀರನ್ನು ಕೊಟ್ಟು, ಮದ್ಯ ಸೇವನೆ ಮಾಡಲು ಸಹಕರಿಸುತ್ತಿದ್ದು, ಆ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ**.15(ಎ)** ರ ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೇ ಸದರಿ ಸ್ಥಳದಲ್ಲಿ 180 ML ನ officer's choice special whiskey ಎಂಬ ಹೆಸರಿನ ಖಾಲಿ ಇರುವ ಮದ್ಯದ ಒಂದು ಟೆಟ್ರಾ ಪ್ಯಾಕ್ ಗಳನ್ನು ಹೊಂದಿ, ಆ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ**.32(3)** ರ ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಪ್ರಶ್ನೆ-1 ಈಗ ಓದಿ ಹೇಳಿದ ನಿಮ್ಮ ಮೇಲೆ ಮಾಡಿರುವ ಆರೋಪಗಳು ತಿಳಿಯಿತೆ?
ಉತ್ತರಃ

ಪ್ರಶ್ನೆ-2ಃ ಸದರಿ ಆರೋಪಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?
ಉತ್ತರಃ

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿ ವಿವರಿಸಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ.)

ದಿನಾಂಕಃ06.03.2026

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ

ಆರೋಪಿ/ತರ ಸಹಿಃ